ಹೋದಾಗ ಈ ಭಗ್ನಪ್ರಣಯಿ ಅಗ್ಗದ ಸಾರಾಯಿ ಕುಡಿದು ತಾರಾಮಾರಾ ಎಗರಾಡಿದ್ದು, ಈಚೆಗೆ 'ಪ್ರೀತಿ ಪ್ರೇಮ ಎಲ್ಲ ನವ ವಸಾಹತು ಶಾಹಿಯಂತೆ' ಅಂತ ಹೊಸತೊಂದು ನಿಯೋ ಕೊಲೋನಿಯಲ್ ಸಿದ್ಧಾಂತ ಮಂಡಿಸುತ್ತಾ... ಮೂವತ್ತು ಕಳೆದಿದ್ದಾನೆ. ಗರುಡನಿಗೆ ರಫಿಯೊಂದು ಗಲಿಬಿಲಿಯ ಮೂಟೆ ಅನ್ನಿಸಿತು. ಈಚೆಗೆ ನಾಣಿಯಂತೂ ಪಕ್ಕಾ ಸಿನಿಕನೇ ಆಗಿದ್ದಾನೆ ಅನ್ನಿಸಿತು ಗರುಡನಿಗೆ.

'ದರಿದ್ರ ಜನರೇಶನ್, ಅಲ್ಲ ಮಾರಾಯ ಇನ್ನೂ ಕಾಲೇಜ್ ಮೆಟ್ಲು ಹತ್ತಿದ ಕೂಡಲೇ ಹೀಗಾದ್ರೆ ಮುಂದೆ ಹೇಗೆ ಅಂತ? ಎಲ್ಲರಿಗೂ ಅದೆಲ್ಲಿಂದಲೋ ಹರಿದುಬರೋ ಅವರಪ್ಪಂದಿರ ಹಣದ ಮದ, ಎಲ್ಲ ಬರೇ ಹೊಸ ಬೈಕ್, ಜೀನ್ಸ್, ಗರ್ಲ್ ಫ್ರೆಂಡ್ಸ್, ಪಾರ್ಟಿ, ಥಸ್... ಯಾರಿಗೂ ನಮ್ಮ ಭವ್ಯ ಸಂಸ್ಕೃತಿ, ಕನ್ನಡ ಸಾಹಿತ್ಯದ ಅದ್ಭುತ ಪರಂಪರೆ... ಏನೂ ಬೇಡ' ಎಂದು ಮೊನ್ನೆ ನಾಣಿ ಗರುಡನೆದುರಿಗೆ ಒದರಿಕೊಂಡದ್ದು, ಆ ಹೊತ್ತು ಕ್ಲಾಸ್‌ನಲ್ಲಿ ಪಂಪನನ್ನು ಹೇಳುವಾಗ ಹುಡುಗನೊಬ್ಬ ತನ್ನ ಕನಸಿನ ಬಿಳೀ ತೊಡೆಗಳ ಬಗ್ಗೆ, ಹುಡುಗಿಯರಲ್ಲಿ ಒಬ್ಬಳು ರಾತ್ರಿ ನೋಡಿದ ಹೊಸಾ ಹಿಂದೀ ಸಿನೆಮಾ ಬಗ್ಗೆ ಮಾತಾಡ್ತ ಇದ್ದ ಪಿಸಿ ಪಿಸಿ ಕೇಳಿ ರೇಗಿ ಕೂಗಾಡಿ ಬಂದು ಸ್ಟಾಫ್ ರೂಂನಲ್ಲಿ ಸಿಗರೇಟ್ ಸುಟ್ಟನಂತೆ. ಕೊಂಚ ಅನುಕಂಪ, ಅಭಿಮಾನದಿಂದ ನಾಲ್ಕು ಜನ ಹುಡುಗಿಯರು ವಯ್ಯಾರವಾಗಿ 'ಸಾರಿ ಸರ್' ಎಂದು ಕ್ಷಮೆ ಬೇಡಿದಾಗ ಅವರ ಆ ಬಿನ್ನಾಣ, ಬೆಡಗು, ಪ್ರೀತಿ 'ನನಗಲ್ಲ' ಅನ್ನಿಸಿ ಆ ಸೊಬಗಿನ ಮೈ ಮೇಲೆ ಬೇರೆ ಯಾರೋ ಹಕ್ಕು ಸ್ಥಾಪಿಸುತ್ತಾರೆ ಎಂದು ನಾಣಿಗೆ ಸಂಕಟವಾಯ್ತಂತೆ!! ಗರುಡ ಆ ಸಂಜೆ ನಾಣಿ ಹೇಳಿದ್ದು ನೆನಪಾಗಿ ಆ ಸಂಕಟ ತನ್ನದೂ ಅನ್ನಿಸಿ ಸಂಕಟಪಟ್ಟುಕೊಂಡ. ಇನ್ನು ಜಾಗೀರ್ದಾರ ಬೆಂಗಳೂರಿನ ಆ ಕಾರ್ಖಾನೆಯಲ್ಲಿ ಶಿಫ್ಟ್‌ಗಳಲ್ಲಿ ತನ್ನನ್ನೇ ಮರೆತಿರುವಾಗ, ಜರ್ನಲಿಸಂನಲ್ಲಿ ವ್ಯವಸ್ಥೆಯನ್ನೇ ಬುಡಮೇಲಾಗಿಸೋ ಆಸ್ಥೆಯ ಐತಾಳ ಬೆಂಗಳೂರಿನಲ್ಲಿ ಆ ದಿನದ ಪೇಟೆಧಾರಣೆ ಕಾಲಂ ಬರೆಯುತ್ತಾ ಕುಳಿತಿರೋದು ನೆನಪಾಗಿ ಗರುಡನಿಗೆ ಒಟ್ಟು ಗುಂಪಿನ ಜಿಗುಪ್ಸೆ ಒಟ್ಟಿಗೇ ಆಯ್ತು.

ನಾವೆಲ್ಲ ಬದುಕಿಯೇ ಇಲ್ಲ ಎನ್ನಿಸಿತು ಗರುಡನಿಗೆ. ಸಾವಿನ ಮುಂದೆ ನಿಂತೇ ಬದುಕನ್ನ ಅಪ್ಪಿಕೊಂಡಿದ್ದ ಆ ಶಂಭುನಾಯ್ಕನೇ ನಮ್ಮೆಲ್ಲರಿಗಿಂತ ಸಾವಿರಪಾಲು ವಾಸಿ ಅನ್ನಿಸಿದಾಗ ಗರುಡನಿಗೆ ಶಂಭುನಾಯ್ಕನ ಚಿಂತೆ ಕಾಡಿತು.

ಹೀಗೆ ಒಂದು ರಜೆಗೆ ಎಲ್ಲರೂ ಸೇರಿ ಬಾರೊಂದನ್ನು ಹೊಕ್ಕು ಇದಕ್ಕೆಂದೇ ಕಷ್ಟಪಟ್ಟು ಹೆಪ್ಪಿಟ್ಟ ದುಡ್ಡಿನಲ್ಲಿ ಬಿಯರ್ ಕುಡಿಯುತ್ತಾ ಕೂತಾಗಲೇ ಆ ಶಂಭುನಾಯ್ಕ ಸಿಕ್ಕಿದ್ದು. ಗರುಡನೊಬ್ಬನ ಹೊರತು ಎಲ್ಲರೂ ಕುಡಿದು ರಂಗೇರಿ ಜಗತ್ತೇ ಜಿಗುಪ್ಸೆಯಲ್ಲಿ ಈಗ ಆತ್ಮಹತ್ಯೆಗೆ ಸಜ್ಜಾಗಿದೆ ಎಂದು ವಾದಿಸುತ್ತಿದ್ದಾಗ ಅಲ್ಲೇ ಬಾರ್‌ನಲ್ಲಿ ಬಿಲ್ ಬರೀತಿದ್ದ ತೆಳ್ಳನೆ ಹುಡುಗ ಶಂಭುನಾಯ್ಕ ಬಂದು – 'ಅಲ್ರಪ್ಪಾ ದೋಸ್ತರ, ಈಗ ಏನಾಗಿಹೋಯ್ತು? ಈತ ಅನ್ನೋದು ಖರೆ... ನಾವ್ಯಾರೂ ಬದುಕೋ ಅಂತ, ಏನಾದ್ರೂ ಮಾಡೋ ಅಂತ ಕಾಲ ನಮ್ದಲ್ಲ. ನಮ್ಮನ್ನೆಲ್ಲ **Motivate** ಮಾಡೋವಂತ ಲೋಹಿಯಾ ತರದೋರೂ ನಮ್ಮಂತ ಹುಡುಗರಿಗೆ ಸಿಕ್ತಿಲ್ಲ. ಆದರೆ ಬದುಕು ಅನನ್ಯ ಕಣ್ರಯ್ಯ. ನನ್ನೇ ನೋಡ್ರಿ ನಾನು ಹಾರ್ಟ್ ಪೇಶಂಟ್. ಮನೇಲಿ ಅಂಬಲೀ ಇಲ್ದಿರೋ ಬಡವನಿಗೆ ಇದರ ಆಪರೇಷನ್‌ಗೆ ಒಂದೂವರೆ ಲಕ್ಷ ತಾ ಅಂದರೆ ನಾ ಎಲ್ಲಿಂದ ತರಲಿ? ನಾ ಸಾಯೋದೇ ಖರೆ. ಆದರೆ ಈಗ ನಾ ಬದ್ಕು ಪೂರ್ಣವಾಗಿ ಬದ್ಕಿದ್ದೀನಿ. ನನಗೆ ಈಗಿರೋ ಈ ಕ್ಷಣ ಖರೆ ನೋಡ್ರಪಾ...'

'ಛೆ! ಆ ಶಂಭುನಾಯ್ಕನ ಮಾತನ್ನಾದರೂ ನಂಬಿ ಖುಷಿಯಾಗಿರ್ಬೇಕು ನಾವು. ಆದರೆ ಅದೂ ಎಂತಹಾ ಖುಷಿ!? ನಾಳೆ ಸಾಯಲೇಬೇಕೂಂತ ಈಗ ಬದುಕೋ ಖುಷಿ. ಆದಾದರೂ ನಮಗೆ ಸಾಧ್ಯವಾ...?' ತನ್ನ ತಲೆಯಲ್ಲಿ ಪುಟಿಯುತ್ತಿದ್ದ ನಿರಂತರ ಮಾತುಗಳಿಂದ ಗರುಡ ಬೇಸತ್ತು ಹೋದ. ನಾಳೆಯವರೆಗೆ ಈ ದಿನವನ್ನ ದೂಡುವುದೇ ದುಸ್ತರವಾದಂತೆನ್ನಿಸಿ ದುಃಖಿಸಿದ. ನನ್ನ ಪೀಳಿಗೆಯೇ ಒಂದು ಶಾಪಗ್ರಸ್ತ ಪೀಳಿಗೆ ಇರಬೇಕು ಅನ್ನಿಸಿ ಅಳು ಬಂದು ಗರುಡ ಬಿಕ್ಕಿ ಬಿಕ್ಕಿ ಅತ್ತ. ಮತ್ತೆ 'ಸದ್ಯ